Nov 12, 2012

ವಿಜಯ ಕರ್ನಾಟಕ
Vijay Karnataka





▲ ಸುನಂದ ಪುಷ್ಕರ್

# ಸಿಟಿಯಲ್ಲಿ ಪರಿಣಿತಿ

ಪ್ರಶಸ್ತಿ ಪುರಸ್ಕೃತ ಬಾಲಿವುಡ್ ತಾರೆ ಪರಿಣಿತಿ ಚೋಪ್ರಾ ಬೆಂಗಳೂರಿಗೆ ಆಗಮಿಸಿದ್ದರು. ಪ್ರಥಮ ಬಾರಿಗೆ ಭಾರತಕ್ಕೆ ಕಾಲಿಟ್ಟಿರುವ ಎಝು ಸಂಸ್ಥೆಯ ಪ್ರಾಜೆಕ್ಟ್ ಉದ್ಘಾಟನೆಗೆ ಆಗಮಿಸಿದ್ದ ಇವರು, ತಾರೆಗಳ ಐಷಾರಾಮಿ ನಿವಾಸಗಳ ಬಗ್ಗೆ ಮಾತಾಡಿದರು. ಈ ಸಂಸ್ಥೆ ವಿಶ್ವ ಮಟ್ಟದಲ್ಲಿ ಹೆಸರು ಮಾಡಿದೆ. ಹಾಲಿವುಡ್ ಖ್ಯಾತ ನಾಮರ ಮನೆಗಳನ್ನು ವಿನ್ಯಾಸಗೊಳಿಸಿದೆ. ಇವುಗಳ ವಿನ್ಯಾಸಕರ ಟೋನಿ ಆಶಾಯ್ ಮೊದಲ ಬಾರಿಗೆ ಭಾರತಕ್ಕೆ ಬಂದಿರುವುದು ಖುಷಿ ತಂದಿದೆ ಅಂದರು.

ಬೆಂಗಳೂರು ಸುಂದರ ನಗರ. ಇಲ್ಲಿ ವಿಭಿನ್ನ ವಿನ್ಯಾಸದ ಐಷಾರಾಮಿ ನಿವಾಸಗಳು ತಲೆಯೆತ್ತಿದರೆ, ಬೆಂಗಳೂರು ಮತ್ತಷ್ಟು ಸೌಂದರ್ಯದಿಂದ ಕಾಣುತ್ತದೆ. ಅಂತಹ ಭರವಸೆ ನನಗಿದೆ ಅಂದರು.

ಇದೇ ಸಂದರ್ಭದಲ್ಲಿ ಲಕಿ ಮೊರಾನಿ ತಮ್ಮ ವಿಶಿಷ್ಟ ಕಾರ್ಯಕ್ರಮದ ಮೂಲಕ ಸಭಿಕರನ್ನು ರಂಜಿಸಿದರೆ, ತಲಾತ್ ಅಜೀಜ್ ಅಪರೂಪದ ಗಾಯನದ ಮೂಲಕ ಮುದ ನೀಡಿದರು. ಈ ಕಾರ್ಯಕ್ರಮದಲ್ಲಿ ರಾಜ್ಯದ ಉಪಮುಖ್ಯಮಂತ್ರಿ ಆರ್.ಅಶೋಕ್, ಪೊಲೀಸ್ ಕಮಿಷನರ್ ಜ್ಯೋತಿ ಪ್ರಕಾಶ್ ಮಿರ್ಜಿ, ಶಬ್ಬೀರ್ ಸೈಫುದ್ದೀನ್ ಎಝು, ಹಿಶಮ್ ಸೈಯದ್ ಎಝು ಮತ್ತಿತರರು ಉಪಸ್ಥಿತರಿದ್ದರು.

> ಬೆಂಗಳೂರಿನ ಖಾಸಗಿ ಸಮಾರಂಭಕ್ಕೆ ಆಗಮಿಸಿದ್ದ ಬಾಲಿವುಡ್ ತಾರೆ ಪರಿಣಿತಿ ಚೋಪ್ರಾ, ಹಾಲಿವುಡ್ ನಟರ ಮನೆ ವಿನ್ಯಾಸದ ಕುರಿತು ಅಚ್ಚರಿಯ ಮಾತುಗಳನ್ನು ಆಡಿದರು.



ಪರಿಣಿತಾ ಚೋಪ್ರಾ



▶ ತಲಾತ್ ಅಜೀಜ್

ಚಿತ್ರಗಳು : ರವೀಂದ್ರ ನಾಯಕ್



▶ ಶಬ್ಬೀರ್ ಸೈಫುದ್ದೀನ್





▶ ತಲಾತ್ ಅಜೀಜ್-ಟೋನಿ ಆಶಾಯ್

EZZY GROUP